ದಿನಾಂಕಃ 09-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಎಸ್ ಎಸ್ ವಕೀಲರಿಂದಃ**

1 ಗುಂಟೆ ಜಮೀನಿನ ಸರ್ವೆ ನಂ 61 ರಲ್ಲಿನ ಉಪ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ಸದರಿ ಆಸ್ತಿಯನ್ನು ನೋಡಿರುತ್ತೇನೆ. ಸದರಿ ಆಸ್ತಿಯಲ್ಲಿ 5 ಅಡಿ ಆಳದ ಬಾವಿ ಇದೆ. ಸದರಿ ಬಾವಿ ಪಕ್ಕ ಒಂದು ಮರ ಇದೆ. ಸದರಿ ಬಾವಿಯಲ್ಲಿ ನೀರು ಇದೆ. ಸಾಕ್ಷಿಗೆ ಈಗ ಒಂದು ಪೊಟೋವನ್ನು ತೋರಿಸಲಾಗಿ ಸದರಿ ಪೊಟೋದಲ್ಲಿ ಕಾಣಿಸುತ್ತಿರುವ ಬಾವಿ ಇರುವ ಜಮೀನು ಸರ್ವೆ ನಂ 61 ಕ್ಕೆಸಂಬಂಧಿಸಿದ್ದು ಎಂದು ಸಾಕ್ಷಿ ನೋಡಿ ಒಪ್ಪಿ ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಡಿ-5** ಎಂದು ಗುರುತಿಸಲಾಯಿತು. ಸದರಿ ನಿಡಿ-5 ರಲ್ಲಿ ಬಾವಿ ಇದೆಯೇ ಎಂದರೆ ಸಾಕ್ಷಿ ಬಾವಿ ಇದೆ ಆದರೆ ಮುಚ್ಚಿ ಹೋಗಿದೆ ಎಂದು ನುಡಿಯುತ್ತಾರೆ. ಸದರಿ ನಿಡಿ-5 ರಲ್ಲಿನ ಬಾವಿ ಪಕ್ಕದಲ್ಲಿ ಕೊಳವೆ ಬಾವಿಯ ಬೋರ್ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಕೊಳವೆ ಬಾವಿ ನಮ್ಮದಲ್ಲ ಎಂದು ನುಡಿಯುತ್ತಾರೆ. ಸದರಿ ಕೊಳವೆ ಬಾವಿ ಯಾವ ಸರ್ವೆ ನಂಬರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ನಾನು ಸದರಿ ಕೊಳವೆ ಬಾವಿ ಯಾವ ಸರ್ವೆ ನಂಬರಿನಲ್ಲಿದೆ ಎಂದು ತಿಳಿದುಕೊಳ್ಳಲು ಪ್ರಯತ್ನಪಟ್ಟಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಕೊಳವೆ ಬಾವಿಯಿಂದ ಸರ್ವೆ ನಂ 17/2 ರ ಜಮೀನಿಗೆ ನೀರುಹರಿಯುತ್ತದೆ ಎಂದರೆ ಸರಿ. ಸದರಿ ಸರ್ವೆ ನಂ 17/2, 5 ಎಕರೆ ಜಮೀನು 1 ನೇ ಪ್ರತಿವಾದಿಯ ಹೆಸರಿಗೆ ಇದೆ ಎಂದರೆ ಸರಿ. ಸದರಿ ಕೊಳವೆ ಬಾವಿಯನ್ನು 1 ನೇ ಪ್ರತಿವಾದಿ ಕೊರೆಸಿದರುಎಂದರೆ ಸರಿಯಲ್ಲ, ಅದನ್ನು ಯಾರುಕೊರೆಸಿದರು ಎಂದು ನನಗೆ ಗೊತ್ತಿಲ್ಲ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ದಿಃ 02-02-2018 ರ 1 ನೇ ಪ್ರತಿವಾದಿಯ ಹೆಸರಿಗೆ ಇರುವ ಕೊಳವೆ ಬಾವಿಯ ಕೊಟೇಶನ್ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ದಾಖಲೆಯಲ್ಲಿ ಸರ್ವೆ ನಂ ನಮೂದು ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿ ಭಾಗಶಃ ಒಪ್ಪಿ ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಡಿ-6** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ದಿಃ 02-02-2018 ರ 1 ನೇ ಪ್ರತಿವಾದಿಯ ಹೆಸರಿಗೆ ಇರುವ ಕೊಳವೆ ಬಾವಿಯ ಕೊಟೇಶನ್ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ದಾಖಲೆಯಲ್ಲಿ ಸರ್ವೆ ನಂ ನಮೂದು ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿ ಭಾಗಶಃ ಒಪ್ಪಿ ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಡಿ-6** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ಅಸಲುದಾವಾ ನಂ 80/2012 ರ ದಾವಾಪತ್ರದ ಪ್ರಮಾಣಿತ ಪ್ರತಿಯಾಗಿದ್ದು ಸದರಿ ದಾವೆಯಲ್ಲಿ ನಾನು 1 ನೇ ಪ್ರತಿವಾದಿಯಾಗಿದ್ದು ಸದರಿ ದಾವೆಯ ದಾವಾಸ್ತಿಗಳಲ್ಲಿ ಸರ್ವೆ ನಂ 61 ರ 1 ಗುಂಟೆ ಜಮೀನು ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿ ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಡಿ-7** ಎಂದು ಗುರುತಿಸಲಾಯಿತು.

ಸದರಿ ನಿಡಿ-7 ರಲ್ಲಿ 1 ಗುಂಟೆ ಜಾಗವನ್ನು ಯಾವ ಕಾರಣಕ್ಕಾಗಿ ಸೇರಿಸಿಲ್ಲ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ನಿಡಿ-7 ರ ವಿಚಾರಣೆ ಬಾಕಿ ಇರುವ ಸಮಯಕ್ಕೂ ಸಹ ಸದರಿ 1 ಗುಂಟೆ ಆಸ್ತಿಯನ್ನು ಯಾವ ಕಾರಣಕ್ಕಾಗಿ ಸೇರಿಸಿಲ್ಲಎಂಬ ಬಗ್ಗೆ ನನಗೆ ಗೊತ್ತಾಗಲಿಲ್ಲ. ಸದರಿ 1 ಗುಂಟೆ ಅಸ್ತಿಯ ಕುರಿತು ಕ್ರಯಪತ್ರವಿದ್ದು ಸದರಿ ಕ್ರಯಪತ್ರವನ್ನು 1 ನೇ ಪ್ರತಿವಾದಿತೋರಿಸಿಲ್ಲದ ಕಾರಣ ನನಗೆ ಗೊತ್ತಿಲ್ಲ. ನಾನು ಸದರಿ ಕ್ರಯ ಪತ್ರವನ್ನು ಉಪನೊಂದಣಾಧಿಕಾರಿಗಳ ಕಚೇರಿಯಿಂದ ಪಡೆಯಬಹುದಿತ್ತು ಎಂದರೆ ಸಾಕ್ಷಿ ನನಗೆ ಉಪಯೋಗವಿಲ್ಲದ ಕಾರಣ ಪಡೆದಿಲ್ಲ ಮತ್ತು ಪರಿಶೀಲಿಸಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಈಗ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ 2017-18 ನೇ ಸಾಲಿನ ಹೊಸಕರೆಗೆ ಗ್ರಾಮದ ಸರ್ವೆ ನಂ 61/3 ರ ಪಹಣಿಯಲ್ಲಿ 1 ನೇ ಪ್ರತಿವಾದಿಯ ಹೆಸರಿಗೆ ಇದೆ ಎಂದು ಸಾಕ್ಷಿ ಅದನ್ನು ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಅದನ್ನು **ನಿಡಿ-8** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ರೀ. ಸರ್ವೆ ನಂ 61/1 ರ ಹಿಸ್ಸಾ ಮೋಜಿಣಿ ಸರ್ವೆಯ ದಾಖಲೆಯಾಗಿದ್ದು ಸದರಿ ದಾಖಲೆಯಲ್ಲಿ 1 ನೇ ಪ್ರತಿವಾದಿಯ ಹೆಸರಿಗೆ 1 ಗುಂಟೆ ಜಮೀನು ದಾಖಲೆಯಾಗಿರುತ್ತದೆ. ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿ ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಡಿ-9** ಎಂದು ಗುರುತಿಸಲಾಯಿತು.

ಸದರಿ 1 ಗುಂಟೆ ಜಮೀನಿನ ಚೆಕ್ಕುಬಂದಿ ನನಗೆ ಭಾಗಶಃ ಗೊತ್ತಿದೆ , ಪೂರ್ವಕ್ಕೆ ದ್ಯಾಮಜ್ಜರ ಜಮೀನು, ಪಶ್ಚಿಮಕ್ಕೆ ಕಾಲುವೆ ಮತ್ತು ಕ್ಷೌರಿಕರ ಹಾಲಪ್ಪನವರ ಜಮೀನು ಬರುತ್ತದೆ. ಉತ್ತರಕ್ಕೆ ಚಾನಲ್ ಬರುತ್ತದೆ ಎಂದೆ ಸರಿ. ದಕ್ಷಿಣಕ್ಕೆಮೂಲ ಮಾಲೀಕರ ಉಳಿದ ಜಮೀನು. ಉತ್ತರಕ್ಕೆಇರುವ ಚಾನಲ್ ನಂತರ ಮೂಲ ಮಾಲೀಕರಿಗೆ ಸೇರಿದ ಯಾವುದೇ ಜಮೀನು ಇಲ್ಲ ಎಂದರೆ ಸರಿ. ಸದರಿ 1 ಗುಂಟೆ ಜಮೀನನ್ನು 1 ನೇ ಪ್ರತಿವಾದಿ ಯಾವ ಕಾರಣಕ್ಕಾಗಿ ಖರೀದಿಸಿದರು ಎಂದರೆ ಸಾಕ್ಷಿ ಸರ್ವೆ ನಂ 17/2 ಪಿ , 31/ಎ, 54, 52, ಹೊಸಕೆರೆ ಗ್ರಾಮದ ಸರ್ವೆ ನಂ 33 , 53 ಜಮೀನುಗಳಿಗೆ ಕೊಳವೆ ಬಾವಿಯಿಲ್ಲಿನೀರು ಕಡಿಮೆಯಾಗುತ್ತದೆ ಎಂಬ ಉದ್ದೇಶದಿಂದ ಖರೀದಿಸಿ 5 ಅಡಿ ಬಾವಿಯನ್ನುತೋಡಿ ಸದರಿ ಬಾವಿಯಿಂದ ಚಾನಲ್ ನಿಂದ ಬರುವ ಬಸೀ ನೀರನ್ನು 5 ಗುಂಡಿ ಬಾವಿಗೆ ಬಿಟ್ಟುಕೊಂಡು ಸದರಿ ನೀರನ್ನು ಮೇಲ್ಕಂಡ ಸರ್ವೆ ನಂಬರುಗಳ ಜಮೀನುಗಳಿಗೆಹಾಯಿಸಲು ಖರೀದಿಸಿರುತ್ತಾರೆ.

(ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.